# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 922 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14/07/2023 |
| ಉತ್ತರಿಸುವ ಸಚಿವರು | : | ಮಾನ್ಯ ಸಚಿವರು ಲೋಕೋಪಯೋಗಿ ಇಲಾಖೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಇರುವ ಜಾಗ ಯಾರ ಸುಪರ್ದಿಯಲ್ಲಿದೆ: | ಬೆಂಗಳೂರಿನ ಸರ್ವೆ ನಂ. 124, ಕಬ್ಬನ್ ರಸ್ತೆ, ಶಾಂತಲಾನಗದಲ್ಲಿರುವ ಲೋಕೋಪಯೋಗಿ ಇಲಾಖೆಯ ನಿವೇಶನದ ಒಟ್ಟು 17 ಎಕರೆ 11 ಗುಂಟೆ ಜಾಗವನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ/01/ಬಿಎಂಡಿ/99, ದಿನಾಂಕ: 07.07.1969 ರಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಇವರಿಗೆ 99 ವರ್ಷಗಳಿಗೆ ಲೀಸ್ ನೀಡಲಾಗಿದೆ. ಪ್ರಸ್ತುತ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಇರುವ ಸದರಿ ಜಾಗವು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಇವರ ಸುಪರ್ದಿಯ ಲ್ಲಿರುತ್ತದೆ. |
| ಆ) | ಲೀಸ್ ತೆಗೆದುಕೊಂಡಿದ್ದಲ್ಲಿ ಎಷ್ಟು ವರ್ಷಕ್ಕೆ; ಲೀಸ್ ಅವಧಿಯು ಯಾವಾಗ ಮುಗಿಯಲಿದೆ ಮತ್ತು ಎಷ್ಟು ಮೊತ್ತಕ್ಕೆ; | ಸದರಿ ಜಾಗವನ್ನು ದಿನಾಂಕ:07.07.1969 ರಿಂದ ಅನ್ವಯವಾಗುವಂತೆ 99 ವರ್ಷಗಳಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಇವರಿಗೆ ಲೀಸ್ ನೀಡಲಾಗಿದ್ದು, ದಿನಾಂಕ: 06.07.2068ಕ್ಕೆ ಗುತ್ತಿಗೆ ಕರಾರು ಮುಕ್ತಾಯಗೊಳ್ಳುತ್ತದೆ.<br>ಒಟ್ಟು 17 ಎಕರೆ 11ಗುಂಟೆ ಜಾಗಕ್ಕೆ ವಾರ್ಷಿಕ ರೂ. 19000/- ರಂತೆ ಬಾಡಿಗೆ ಪಾವತಿಸುತ್ತಿರುತ್ತಾರೆ. |
| ಇ) | ಕ್ರೀಡಾಂಗಣದ ನಿರ್ವಹಣೆ ಯಾರು ಮಾಡುತ್ತಿದ್ದಾರೆ; ನಿರ್ವಹಣೆಗೆ ತಿಂಗಳಿಗೆ ಎಷ್ಟು ವೆಚ್ಚವಾಗುತ್ತದೆ; (ವಿಸ್ತೃತ ವಿವರ ನೀಡುವುದು) | ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಇವರು ಕ್ರೀಡಾಂಗಣದ ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. |

| | | |
|---|---|---|
| | | ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, (ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್) ರವರು ವರದಿ ಮಾಡಿರುವಂತೆ, ಮಾಸಿಕ ನಿರ್ವಹಣೆ ವೆಚ್ಚ ಸರಾಸರಿ ಮೊತ್ತ ರೂ.5.29 ಕೋಟಿಗಳಾಗಿರುತ್ತದೆ. |
| ಈ) | ಕ್ರೀಡಾಂಗಣ ನಿರ್ವಹಣೆಗೆ ಬೇಕಾಗುವ ಸಂಪನ್ಮೂಲದ ಕ್ರೂಢೀಕರಣ ಹೇಗೆ ನಡೆಯುತ್ತಿದೆ? (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ರವರು ನೀಡಿರುವ ಮಾಹಿತಿಯು ಈ ಕೆಳಕಂಡಂತಿರುತ್ತದೆ:<br>"KSCA receives subsidy from the Board of control for Cricket in India (BCCI).<br>KSCA does not get any grants either from Central or State Government and KSCA through its own fund has been developing this state of the art cricketing infrastructure". |

**ಸಂಖ್ಯೆ: ಲೋಇ 31 ಬಿಎಲ್ ಕ್ಯೂ 2023**

**(ಸತೀಶ್ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.